MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 7-5-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದಿಂದ ಈ ವರೆಗೆ 7 ಮಿಲಿಯನ್ ಟನ್ ಸಕ್ಕರೆ ರಫ್ತು 9 ಮಿಲಿಯನ್ ಟನ್ ರಫ್ತು ಸಾಧ್ಯತೆ

ಭಾರತದಿಂದ ಈ ವರ್ಷ 2021–22 ಈ ವರೆಗೆ 7 ಮಿಲಿಯನ್ ಟನ್ ಸಕ್ಕರೆ ರಫ್ತಾಗಿದ್ದು ಈ ಮಾರಾಟ ವರ್ಷದಲ್ಲಿ 9 ಮಿಲಿಯನ್ ಟನ್ ಸಕ್ಕರೆ ರಫ್ತಾಗುವ ಸಾಧ್ಯತೆಯಿದೆಯೆಂದು ಇಸಮಅ ಹೇಳಿದೆ.

### ಗೋಧಿ ದರ ಹೆಚ್ಚಳ, ಜೋಳ ದರ ಸ್ಥಿರ

ರಫ್ತು ಬೇಡಿಕೆ ಹೆಚ್ಚಳದಿಂದ ಗೋಧಿ ದರ ಹೆಚ್ಚಳವಾಗಿದೆ. ಜೋಳ ದರ ದೇಶೀ ಮಾರುಕಟ್ಟೆಗಳಲ್ಲಿ ಸ್ಥಿರವಾಗಿದೆ. ಬಿಹಾರದಲ್ಲಿ ವಿಪರೀತ ಮಳೆಯಿಂದ ವ್ಯಾಪಾರ ವಹಿವಾಟು ಕಡಿಮೆಯಾಗಿದ್ದು, ಜೋಳ ದರ ಸ್ಥಿರವಿದೆ. ಕರ್ನಾಟಕದ ಮಾರುಕಟ್ಟೆಗಳಲ್ಲಿಯೂ ಜೋಳ ದರ ಸ್ಥಿರವಿದೆ. ಜಿಂಬಾಬ್ವೆಯಲ್ಲಿ ಜೋಳ ಉತ್ಪಾದನೆ 50 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.

### ಭಾರತದಲ್ಲಿ 35.5 ಮಿಲಿಯನ್ ಟನ್‌ಗಳ ದಾಖಲೆ ಸಕ್ಕರೆ ಉತ್ಪಾದನೆ

ಭಾರತದಲ್ಲಿ ಈ ವರ್ಷದ ಸಕ್ಕರೆ ಉತ್ಪಾದನೆ ಹಿಂದಿನ ಗರಿಷ್ಠ ಉತ್ಪಾದನಾ ದಾಖಲೆಯಾದ 34.2 ಮಿಲಿಯನ್ ಟನ್‌ಗಳನ್ನು ಮೀರಿ 35.5 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ದಾಖಲೆ ರಫ್ತಿನಿಂದ ರೂ.30000 ಕೋಟಿ ಗಳಿಕೆಯಾಗಲಿದೆಯೆನ್ನಲಾಗಿದ್ದು, ದಾಖಲೆ ಸಕ್ಕರೆ ಉತ್ಪಾದನೆಯ ಹೊರತಾಗಿಯೂ ದರ ಕುಸಿತವಾಗಿಲ್ಲ.

### ಏಶಿಯಾ ಹಾಗೂ ಆಫ್ರಿಕಾದ ರಾಷ್ಟ್ರಗಳಿಂದ ಬೇಡಿಕೆ ಹೆಚ್ಚಳ, ಭಾರತೀಯ ಅಕ್ಕಿಯ ರಫ್ತು ದರ ಹೆಚ್ಚಳ

ಭಾರತದ ಅಕ್ಕಿಗೆ ಏಶಿಯಾ ಹಾಗೂ ಆಫ್ರಿಕಾದ ರಾಷ್ಟ್ರಗಳಿಂದ ಬೇಡಿಕೆ ಹೆಚ್ಚಳದಿಂದ ಈ ವಾರ ಅಕ್ಕಿ ರಫ್ತು ದರ ಹೆಚ್ಚಳವಾಗಿದೆ. ಪೂರೈಕೆಯ ಇಳಿಕೆಯಿಂದ ವಿಯೆಟ್ನಾಂ ಮೂಲದ ಅಕ್ಕಿ ದರವೂ ಹೆಚ್ಚಳವಾಗಿದೆ. ಉತ್ಪಾದನಾ ಸೀಜನ್ ಕೊನೆಯಾದ್ದರಿಂದ ಪೂರೈಕೆಯೂ ಬಿಗುವಾಗಿದೆಯೆನ್ನಲಾಗಿದೆ.

### ಬೇಳೆಕಾಳು ದರಗಳು ಇಳಿಕೆ

ಹೊಸ ಬೆಳೆಯ ಉತ್ಪಾದನೆ ಆವಕ ಪ್ರಾರಂಭದಿಂದ ಬೇಳೆಕಾಳುಗಳ ದರ ಇಳಿಕೆಯಾಗುತ್ತಿದ್ದು, ದರಗಳು ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ಉತ್ತರಪ್ರದೇಶ ಮುಂತಾದ ಉತ್ಪಾದನಾ ವಲಯಗಳಲ್ಲಿ ಇಳಿಕೆಯಾಗಿದೆಯೆನ್ನಲಾಗಿದೆ.

### ತೆಲಂಗಾಣ, ಆಂಧ್ರ ಪ್ರದೇಶಗಳಲ್ಲಿ ಕೀಟಬಾಧೆಯಿಂದ ಕೆಂಪು ಮೆಣಸಿನಕಾಯಿ ಬೆಳೆ ನಾಶ

ತೆಲಂಗಾಣದಲ್ಲಿ 50 ಶೇಕಡಾ ಹಾಗೂ ಆಂಧ್ರಪ್ರದೇಶಗಳಲ್ಲಿ ಗಣನೀಯ ಪ್ರಮಾಣದ ಕೆಂಪು ಮೆಣಸಿನಕಾಯಿ ಬೆಳೆಹಾನಿ ಕೀಟಬಾಧೆಯಿಂದ ಸಂಭವಿಸಿದೆಯೆನ್ನಲಾಗಿದೆ. ಕೆಲವು ರೈತರು ತೆಲಂಗಾಣದಲ್ಲಿ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿದ್ದಾರೆನ್ನಲಾಗಿದೆ. ಉತ್ಪಾದನಾ ಇಳಿಕೆಯಿಂದ ಮೆಣಸಿನಕಾಯಿ ದರ ಈ ವರ್ಷ ಹೆಚ್ಚಳದಲ್ಲೇ ಮುಂದುವರಿದಿದೆ.